ದಿನಾಂಕಃ 25-07-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ Sri MCR ವಕೀಲರಿಂದಃ**

ನಿ.ಡಿ.33 ರ ಮೇಲ್ಮನವಿಯಲ್ಲಿ ಈ ದಾವೆಯ ವಾದಿ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ . ಸದರಿ ಮೇಲ್ಮನವಿಯಲ್ಲಿ ಈ ದಾವೆಯ ವಾದಿ ಪಕ್ಷಗಾರರಾಗಿಲ್ಲದಿರುವ ಕಾರಣ ಆ ಮೇಲ್ಮನವಿಯ ವಿಚಾರಗಳು ಆಕೆಗೆ ಗೊತ್ತಿರುವುದಿಲ್ಲ ಎಂದರೆ ಸರಿ . ನಿ.ಡಿ.39 ರ ಪಹಣಿಯಲ್ಲಿ ಸ್ವತ್ತಿನ ಸರ್ವೆ ನಂ. 254/3 ರ ಖಾತೆಯು ಚನ್ನಬಸವಯ್ಯ, ಸಿದ್ಧಪ್ಪ ಮತ್ತು ಶಾಂತರಾಜುರವರ ಹೆಸರಿಗೆ ಜಂಟಿಯಾಗಿರುತ್ತದೆ ಎಂದರೆ ಸಾಕ್ಷಿಯು ಕಂದಾಯ ದಾಖಲಾತಿಗಳಲ್ಲಿ ಅವರ ಹೆಸರುಗಳನ್ನು ಜಂಟಿಯಾಗಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಸ.ನಂ. 254/3 ಈ ದಾವೆಯ ದಾವಾ ಸ್ವತ್ತಾಗಿರುತ್ತದೆ ಎಂದರೆ ಸರಿ . ನಿ.ಪಿ.31 ರಿಂದ 47 ರ ದಾಖಲೆಗಳಿಗೂ ಈ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.31 ರಿಂದ 47 ರ ದಾಖಲೆಗಳು ವಾದಿಯ ಹಿಸ್ಸೆಗೆ ಬದ್ಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.